ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ಎಲ್ ಜಾಲಪ್ಪ (ಸಹಕಾರಿ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಸ್ವಾಧೀನತೆ ಮತ್ತು ವರ್ಗಾವಣೆ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

SRI B. BASAVALINGAPPA.—One second, Sir. I would like to know who is the Minister in charge of Urban Development.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದೊಡ್ಡ ವಿಚಾರವನ್ನೇ ತ್ತಿ ಬಿಟ್ಟಿದ್ದಾರೆ. ಉತ್ತರವನ್ನು ಹೇಳಿಬಿಡುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಬರೆದಿರುವ ಕಾಗದ ಹೀಗಿದೆ. ''ಶ್ರೀ ವಿ.ಎಲ್. ಪಾಟೀಲರು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ ನಗರಾಭಿವೃದ್ಧಿ ಖಾತೆ ನನ್ನ ಅಧೀನದಲ್ಲಿರುತ್ತದೆ. ಈ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳ ಬಗ್ಗೆ ಹಾಗೂ ಇನ್ನಿತರ ಕಾರ್ಯ ಕಲಾಪಗಳ ಬಗ್ಗೆ ಕಾನೂನು ಸಚಿವರಾದ ಶ್ರೀ ಎ. ಲಕ್ಷ್ಮೀಸಾಗರ್ ಅವರು ನೋಡಿಕೊಳ್ಳುತ್ತಾರೆ. ಇದಕ್ಕೆ ನಾನು ಒಪ್ಪಿಗೆಯನ್ನು ಕೊಟ್ಟಿದ್ದೇನೆ.''

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳ ಪತ್ರದ ಬಗ್ಗೆ ನಮಗೆ ಏನೂ ಇಲ್ಲ. ಶ್ರೀ ವಿ.ಎಲ್. ಪಾಟೀಲರು ರಾಜೀನಾಮೆ ಕೊಟ್ಟಿದ್ದಾರೆ. ಆಮೇಲೆ ಅನೇಕ ಜನ ಮಂತ್ರಿಗಳನ್ನು ಕೈಬಿಡಲಾಗಿದೆ. ಈ ಮಂತ್ರಿಗಳನ್ನು ಏಕೆ ಬಿಟ್ಟರೋ ನನ್ನ ಪ್ರಶ್ನೆ ಅಲ್ಲ. ಅದು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದುದು. ಅವರು ತಮಗೆ ಬೇಕಾದವರನ್ನು ಇಟ್ಟುಕೊಳ್ಳಬಹುದು, ಬೇಡವಾದವರನ್ನು ತೆಗೆದುಹಾಕಬಹುದು. ಆದರೆ ಅನೇಕ ಜನ ಬಿಟ್ಟವರಲ್ಲಿ ಚಲೋ ಜನರು ಇದ್ದರು. ಪರತ್ತು ಇನ್ನೂ ಅನೇಕ ಜನರ ಮೇಲೆ ನಾವು ಕರಪ್ಷನ್ ಚಾರ್ಜನ್ನೂ ಮಾಡಿದ್ದೆವು ನಮ್ಮ ಕರಪ್ಷನ್ ಚಾರ್ಜಿಗೆ ಒಳಪಟ್ಟು ಅವರನ್ನು ಬಿಟ್ಟರೋ ಅಥವಾ ಇನ್ ಎಫಿಷಿಯೆಂಟ್ ಎಂದು ಬಿಟ್ಟರೋ. ಯಾವ ಸಲುವಾಗಿ ಬಿಟ್ಟರೋ? We demand on behalf of the opposition the statement of all Ministers who have resigned, Sir.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸತ್ಯ ಹಾವನ್ನು ಬಡಿಯಲಿಕ್ಕೆ ಸನ್ಮಾನ್ಯ ಕೆ.ಎಚ್. ಪಾಟೀಲರು ಹೊರಟಿದ್ದಾರೆ. ವಿಧಾನ ಸಭಾ ಸದಸ್ಯರು ಯಾರೂ ಮಂತ್ರಿಗಳ ಮೇಲೆ ಆಪಾದನೆಗಳನ್ನು ಮಾಡಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಪದೇಪದೇ ಹೇಳುತ್ತಲೇ ಬಂದಿದ್ದಾರೆ. ಅವರು ಎಷ್ಟು ಜನರನ್ನು ಮಂತ್ರಿಗಳನ್ನಾಗಿ ಇಟ್ಟುಕೊಳ್ಳಬಹುದು, ಯಾರನ್ನು ಬಿಡಬಹುದು ಎನ್ನುವ ಹಕ್ಕು ಅವರಿಗೆ ಇದ್ದೇ ಇದೆ, ಈ ಸಾಮಾನ್ಯ ತಿಳುವಳಿಕೆ ಮಾನ್ಯ ಸದಸ್ಯರಿಗೆ ಇದೆಯೆಂದು ನಾನು ಭಾವಿಸಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯ ಪರಂತ್ರಿಗಳನ್ನು ಸಂತೋಷಗೊಳಿಸುವುದಕ್ಕೆ ಮಾನ್ಯ ಕಾನೂನು ಮಂತ್ರಿಗಳು ಏನೇನೊ ಹೇಳುತ್ತಿದ್ದಾರೆ. ನಿಜ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಪೂರ್ಣವಾದ ಅಧಿಕಾರ ಇದೆ. ಕಾನೂನು ಮಂತ್ರಿಯನ್ನೂ ಕೈಬಿಡಬೇಕೆ ಬೇಡವೇ ಎನ್ನುವುದನ್ನು ಅವರೇ ವಿಚಾರ ಮಾಡಲಿ ಆದರೆ ಮಾನ್ಯ ಅಧ್ಯಕ್ಷರೇ. ಇದೆಲ್ಲಾ ಸಾರ್ವಜನಿಕ ಸಮಸ್ಯೆ ಇದೆ. ಅನೇಕ ಜನರು ಅವರ ಪಕ್ಷದವರೇ ನಮಗೆ ಪತ್ರ ಬರೆದಿದ್ದಾರೆ,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನೋಟೀಸ್ ಇಲ್ಲದೇ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಶೂನ್ಯ ವೇಳೆ ಕೂಡ ಅಲ್ಲ.

ಶ್ರೀ ಕೆ.ಎಚ್. ಪಾಟೀಲ್ —ಅನೇಕ ಜನರು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದಿದ್ದ ಪತ್ರದ ಪ್ರತಿಗಳನ್ನು ನಮಗೆ ಕಳಿಸಿದ್ದಾರೆ. ಚಲೋ ಜನರನ್ನೂ ಸಹ ಏತಕ್ಕೆ ಇವರು ಕೈಬಿಟ್ಟಿದ್ದಾರೆ?

ಅಧ್ಯಕ್ಷರು.—ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇದು ಸಂದರ್ಭ ಅಲ್ಲ. ಮಾನ್ಯ ಜಾಲಪ್ಪನವರೇ, ನೀವು ವಿಧೇಯಕ ಮಂಡನೆ ಮಾಡಿರಿ.

---

*ANNEXURE

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಏಕೆ ಅವಸರ ಮಾಡುತ್ತೀರಿ? ನನಗೂ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ಇಲ್ಲಿ ಕೇಳಿ. ಶ್ರೀ ವಸಂತರಾವ್ ಪಾಟೀಲರು ರಾಜೀನಾಮೆ ಕೊಟ್ಟಮೇಲೆ ಅವರ ಡಿಪಾರ್ಟ್‌ಮೆಂಟ್ ಮುಖ್ಯಮಂತ್ರಿಗಳ ಕೈಗೆ ಇದೆ. ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲದೇ ಇರುವ ಕಾರಣ ಮಾನ್ಯ ಕಾನೂನು ಮಂತ್ರಿಗಳಿಗೆ ಆ ಅಧಿಕಾರ ಕೊಟ್ಟಿದ್ದಾರೆ, ಇದರಲ್ಲಿ ಹೇಳುವುದು, ಕೇಳುವುದು ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೆ. ಎಚ್. ಪಾಟೀಲರು ಪ್ರಶ್ನೆ ಕೇಳಿದರು, ಅವರಿಗೆ ಉತ್ತರ ಕೊಟ್ಟಿದ್ದಾರೆ. ನಾನು ಜಾಸ್ತಿ ಕೇಳುವುದಿಲ್ಲ. ಈಗ ಮಾನ್ಯ ಪಾಟೀಲರು ಒಂದು ಮಾತನ್ನು ಹೇಳಿದರು, ಅವರಂತೆ ಬಹಳ ಒಳ್ಳೆಯ ಮಂತ್ರಿಗಳೂ ಕೂಡ ಬಿಟ್ಟು ಹೋಗಿದ್ದಾರೆ.

ಅಧ್ಯಕ್ಷರು.—ಇದು ಹೇಗೆ ಈ ಸಂದರ್ಭದಲ್ಲಿ ಕೆಲವೆಮೆಂಟ್ ಆಗುತ್ತದೆ? ನೀವು ಈಗ ಕುಳಿತು ಕೊಳ್ಳಿ. ಜಾಲಪ್ಪನವರೇ, ನೀವು ವಿಧೇಯಕವನ್ನು ಮಂಡನೆ ಮಾಡಿ.

ಶ್ರೀ ಕೆ. ಮಲ್ಲಪ್ಪ.—ವಿರೋಧಪಕ್ಷದವರದ್ದು ಈಗ ದೇವರಿಲ್ಲದ ಗುಡಿಯ ಪರಿಸ್ಥಿತಿ ಇದೆ. ಅದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಮರೆತಿರುವ ಹಾಗೆ ಕಾಣುತ್ತದೆ.

(ಗೊಂದಲ)

SRI K.H, PATIL.—What has he said about the Opposition Party? We are not here to tolerate any nonsense. What he said? He must withdraw it or you expunge it. ನಿಮಗೆ ಈಗ ಅಧಿಕಾರ ಇದೆ, ನಮಗೆ ಅಧಿಕಾರ ಇಲ್ಲ. ಅಧಿಕಾರದಲ್ಲಿದ್ದವರಂ ತಪ್ಪು ಮಾಡಿದರೆ ನಾವು ಕೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.- ತಪ್ಪು ಮಾಡದೇ ಇದ್ದರೂ ಪ್ರಸಂಗಕ್ಕೆ ಬಾರದೇ ಇರತಕ್ಕಂಥ ವಿಷಯಗಳ ಬಗ್ಗೆ ಟೀಕೆ ಮಾಡಿದರೆ ಸರಿಯಾದ ಉತ್ತರವನ್ನು ಯಾರಾದರೂ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಜಾಲಪ್ಪನವರೇ ನೀವು ಮುಂದೆ ಮಾಡಿರಿ.

## ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟದ (ತಿದ್ದುಪಡಿ) ವಿಧೇಯಕ

## ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟದ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.*

---

*Annexure.